# ಮುಂದಿನ ಅಧ್ಯಕ್ಷೆ ಓಪ್ರಾ?

**2020**ರಲ್ಲಿ ನಡೆಯಲಿರುವ ಅಮೆರಿಕದ ಅಧ್ಯಕ್ಷ ಚುನಾವಣೆಯಲ್ಲಿ ಓಪ್ರಾ ವಿನ್‌ಫ್ರೇ ಸ್ಪರ್ಧಿಸುತ್ತಾರೆಯೆ? ಇದೀಗ ಅಮೆರಿಕದಲ್ಲಿ ಪದೇ ಪದೇ ಚರ್ಚೆಯಾಗುತ್ತಿರುವ ಮಿಲಿಯನ್ ಡಾಲರ್ ಪ್ರಶ್ನೆಯಿದು. ಈ ಪ್ರಶ್ನೆ ಕೇಳಿದಾಗಲೆಲ್ಲ ಓಪ್ರಾ ವಿನ್‌ಫ್ರೇ, 'ಓಹ್ ಗಾಡ್! ಖಂಡಿತಾ ಇಲ್ಲ' ಎಂದೇ ಉತ್ತರ ನೀಡಿದ್ದಾರೆ. 'ಅಧ್ಯಕ್ಷ ಚುನಾವಣೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ದಯವಿಟ್ಟು ಕೇಳಬೇಡಿ' ಎಂದು ವಿನಂತಿ ಮಾಡಿದ್ದಾರೆ. ಆದರೂ ಮಾಧ್ಯಮ ಮಿತ್ರರಿಂದ ಅವರಿಗೆ ಪದೇ ಪದೇ ಅಧ್ಯಕ್ಷ ಹುದ್ದೆಯ ಕುರಿತು ಪ್ರಶ್ನೆಗಳು ಬರುವುದು ನಿಂತಿಲ್ಲ. ಕಳೆದ ವಾರ ಇಂತಹದ್ದೇ ಪ್ರಶ್ನೆಗೆ, 'ನಾನೇನಾದರೂ ಮನಸ್ಸು ಬದಲಿಸಿ ಅಧ್ಯಕ್ಷ ಹುದ್ದೆಗೆ ನಿಲ್ಲಬೇಕೆಂದರೆ ಆ ದೇವರೇ ಬಂದು ನನಗೆ ಹೇಳಬೇಕು' ಎಂಬ ಉತ್ತರ ನೀಡಿದ್ದಾರೆ! ಈ ವರ್ಷದ ಆರಂಭದಲ್ಲಿ ಗೋಲ್ಡನ್ ಗ್ಲೋಬ್ಸ್ ಪ್ರಶಸ್ತಿ ಸ್ವೀಕರಿಸಿದ ಸಮಾರಂಭದಲ್ಲಿ ಓಪ್ರಾ ಅವರು ಮಾಡಿದ ಭಾಷಣದ ಹಿನ್ನೆಲೆಯಲ್ಲಿ ಈಕೆ ಅಮೆರಿಕದ ಮುಂದಿನ ಅಧ್ಯಕ್ಷೆ ಆಗಬಹುದು ಎನ್ನುವ ಊಹೆಗಳು ಶುರುವಾಗಿದ್ದವು. 'ಅಯ್ಯೊ, ಅಮೆರಿಕದ ಅಧ್ಯಕ್ಷ ಆಗುವುದೆಂದರೆ ಇಡೀ ಜಗತ್ತಿನ ಹೊಣೆ ತಲೆಯ ಮೇಲೆ ಹೊತ್ತುಕೊಂಡಂತೆ. ನನ್ನ ಕೈಯಿಂದ ಅದೆಲ್ಲ ಆಗಲ್ಲಪ್ಪಾ..' ಎಂದು ಓಪ್ರಾ ಆಗ ಪ್ರತಿಕ್ರಿಯೆ ನೀಡಿದ್ದರು.

ಈ 'ಟಾಕ್‌ಷೋ ಕ್ವೀನ್' ನಟಿಸಿರುವ 'ಎ ರಿಂಕಲ್ ಇನ್ ಟೈಮ್' ಸಿನಿಮಾ ಬಿಡುಗಡೆಯಾಗಿದೆ. ಕೆಲವು ಚಿತ್ರವಿಮರ್ಶಕರು ಸಿನಿಮಾದ ತುಂಬ ಆವರಿಸಿಕೊಂಡಿರುವ ಓಪ್ರಾ ನಟನೆಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡಿದ್ದಾರೆ. ಆದರೆ ಈ ಮಕ್ಕಳ ಸೈನ್ಸ್ ಫಿಕ್ಷನ್ ಮಕ್ಕಳಿಗಂತೂ ಸಖತ್ ಬೋರ್ ಹೊಡೆಸುವಂತಿದೆ ಎಂದು ವೀಕ್ಷಕರ ವಿಮರ್ಶೆ ಹೊರಬಿದ್ದಿದೆ. ಮೆಡಲೀನ್ ಲ ಎಂಗಲ್ 1962ರಷ್ಟು ಹಿಂದೆಯೇ ಬರೆದ ಕಾದಂಬರಿ ಆಧಾರಿತ ಸಿನಿಮಾವಿದು.

ಕಡುಬಡತನದ ಬಾಲ್ಯದಲ್ಲಿ ಗೋಣಿಚೀಲದಿಂದ ಮಾಡಿದ ಬಟ್ಟೆಗಳನ್ನು ಧರಿಸಿ ಓಡಾಡುತ್ತಿದ್ದ; 12ರ ಎಳವೆಯಲ್ಲೇ ಅತ್ಯಾಚಾರಕ್ಕೆ ಒಳಗಾದ; ಮನೆಯಲ್ಲಿ ಮತ್ತು ನೆರೆಯವರಲ್ಲಿ ಬೈಗುಳ ಕೇಳುತ್ತಲೇ ಬೆಳೆದ ಓಪ್ರಾ, ರೇಡಿಯೋ ಪ್ರವೇಶಿಸಿ ಟಾಕ್‌ಷೋಗಳನ್ನು ನಡೆಸಿ ಈ ಹಂತಕ್ಕೆ ಏರಿರುವ ಕಥೆಯೇ ರೋಚಕ. ಆರಂಭದಲ್ಲಿ ರೇಡಿಯೋ, ಟೀವಿಗಳಲ್ಲೂ ಹಲವು ಕಷ್ಟಗಳು ಎದುರಾದವು. ಇನ್ನೂ 19ರ ಹರೆಯದ ಹುಡುಗಿ ಸೀನಿಯರ್‌ಗಳ ಜತೆ ಸರಿಸಮನಾಗಿ ಕಾರ್ಯಕ್ರಮಗಳನ್ನು ನಿರ್ವಹಿಸುವುದು ಯಾರಿಗೂ ಇಷ್ಟವಿರಲಿಲ್ಲ. ಆದರೆ ಈಕೆಯ ಮಾತುಗಳನ್ನು ಕೇಳುವ ದೊಡ್ಡದೊಂದು ಜನಸಮೂಹ ಸಿದ್ಧವಾದ ಬಳಿಕ ಸ್ಟಾರ್‌ಗಿರಿ ಸಿಕ್ಕಿತು. ರೇಡಿಯೋದಿಂದ ಟಿವಿ, ಟಿವಿ ಯಿಂದ ಸಿನಿಮಾ– ಹೀಗೆ ಈಕೆಯ ಪಯಣ ಬೆಳೆಯಿತು. ಕಳೆದ 25 ವರ್ಷಗಳಿಂದ ಈಕೆ ನಡೆಸುತ್ತಿರುವ 'ಓಪ್ರಾ ವಿನ್‌ಫ್ರೇ ಟಾಕ್ ಷೋ' ಈಕೆಯನ್ನು ಎಲ್ಲಿಂದ ಎಲ್ಲಿಗೋ ತಂದು ನಿಲ್ಲಿಸಿದೆ. ಈಕೆಯ ಪ್ರೊಡಕ್ಷನ್ ಸ್ಟುಡಿಯೊ ಹಾರ್ಪೊ ಪ್ರೊಡಕ್ಷನ್ಸ್ ಇವತ್ತು ಅಮೆರಿಕದ ದೈತ್ಯ ಕಂಪೆನಿಗಳಲ್ಲಿ ಒಂದು. ಓ, ದಿ ಓಪ್ರಾ ಮ್ಯಾಗಸಿನ್ ಅತ್ಯಂತ ಜನಪ್ರಿಯ. ದಿ ಓಪ್ರಾ ವಿನ್‌ಫ್ರೇ ನೆಟ್‌ವರ್ಕ್ ಜಗತ್ತಿನ 8.2 ಕೋಟಿ ಮನೆಗಳನ್ನು ನೇರವಾಗಿ ತಲುಪುತ್ತಿದೆ.

ಇವತ್ತು ಈಕೆ ಜಗತ್ತಿನ ಅತಿ ದೊಡ್ಡ ಶ್ರೀಮಂತರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದರೆ ಅದಕ್ಕೆ ಬದುಕಿನಲ್ಲಿ ಬಂದ ಕಷ್ಟಗಳನ್ನೆಲ್ಲ ಅವುಡುಕಚ್ಚಿ ಎದುರಿಸಿದ್ದೇ ಕಾರಣ. ಈಗ ಅಮೆರಿಕದ ಕರಿಯರಲ್ಲೇ ಅತಿದೊಡ್ಡ ಶ್ರೀಮಂತೆ ಎನ್ನಿಸಿರುವ ಓಪ್ರಾ ಕೊಡುಗೈ ದಾನಿಯೂ ಹೌದು. ಸೌಲಭ್ಯವಂಚಿತ ಮಕ್ಕಳಿಗಾಗಿ ಈಕೆ ನಡೆಸುತ್ತಿರುವ ಶಾಲೆಯಲ್ಲಿ ಸಾವಿರಾರು ಮಕ್ಕಳು ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ತನ್ನ ಟೀವಿ ಟಾಕ್ ಷೋನಲ್ಲಿ ಈಕೆ ನೀಡುವ ದುಬಾರಿ ಬಹುಮಾನಗಳಂತೂ ಜನಪ್ರಿಯತೆಯನ್ನು ಆಕಾಶಕ್ಕೇರಿಸಿದೆ.

ಜಮೀನು ಮತ್ತು ಬಂಗಲೆಗಳನ್ನು ಖರೀದಿಸುವುದು ಓಪ್ರಾ ಅವರ ಹಳೇ ಷೋಕಿ. 64ರ ಇಳಿಹರೆಯದಲ್ಲಿ ಇಷ್ಟೆಲ್ಲ ಬಂಗಲೆ, ತೋಟಗಳನ್ನು ಖರೀದಿಸಿ ಏನು ಮಾಡುತ್ತಾರೋ ಗೊತ್ತಿಲ್ಲ. ಆದರೆ ಖರೀದಿಯಂತೂ ನಿಂತಿಲ್ಲ. ಎರಡು ವರ್ಷಗಳ ಹಿಂದೆ ಸಾಂಟಾ ಬಾರ್ಬರಾದ ಮೊಂಟೆಸಿಟೋದಲ್ಲಿ ಈಕೆ 28.8 ದಶಲಕ್ಷ ಡಾಲರ್ ಕೊಟ್ಟು ಖರೀದಿಸಿದ 23 ಎಕರೆಯ ಜಮೀನು ಮತ್ತು ಬಂಗಲೆ ದೊಡ್ಡ ಸುದ್ದಿಯಾಗಿತ್ತು. ಈ ಬಂಗಲೆಯ ಒಳವಿಸ್ತೀರ್ಣವೇ 5000 ಚದರ ಅಡಿಗಿಂತ ಹೆಚ್ಚಿದೆ. ಎರಡು ತೆರೆದ ಬಾವಿ, ದೊಡ್ಡದೊಂದು ಕುದುರೆ ಲಾಯ, ಕುದುರೆ ಓಡಿಸಲು ಟ್ರ್ಯಾಕ್– ಹೀಗೆ ಈ ತೋಟದ ಬಗ್ಗೆ ಹತ್ತಾರು ರೋಚಕ ಕಥೆಗಳು ಹಬ್ಬಿದ್ದವು. ಆದರೆ ಓಪ್ರಾ ಅಲ್ಲಿ ಈವರೆಗೆ ವಾಸಿಸಿಲ್ಲ. ಏಕೆಂದರೆ ಸಮೀಪದಲ್ಲೇ ಆಕೆಯ 50 ದಶಲಕ್ಷ ಡಾಲರ್ ಮೌಲ್ಯದ ಇನ್ನೊಂದು ತೋಟ–ಮನೆ ಇದೆ. ಅಲ್ಲಿರುವ ಬಂಗಲೆ 23,000 ಚದರ ಅಡಿ ವಿಸ್ತೀರ್ಣದ್ದು! 60 ಎಕರೆಗೂ ಹೆಚ್ಚಿನ ವಿಸ್ತೀರ್ಣದ ಈ ತೋಟದಲ್ಲೇ ಆಕೆ ಹೆಚ್ಚಾಗಿ ವಾಸಿಸುವುದು. ಮೌವಿಯಲ್ಲಿ ಇನ್ನೊಂದು 163 ಎಕರೆ ಜಮೀನಿದೆ. ಟೆಲ್ಲುರೈಡ್‌ನಲ್ಲಿ 14 ದಶಲಕ್ಷ ಡಾಲರ್‌ಗೆ ಖರೀದಿಸಿದ ಮನೆಯೊಂದಿದೆ. 11 ವರ್ಷಗಳ ಹಿಂದೆಯೇ ಈಕೆ 42 ದಶಲಕ್ಷ ಡಾಲರ್ ಕೊಟ್ಟು ಖರೀದಿಸಿದ ಜೆಟ್ ವಿಮಾನ ಆಗಲೇ ಎಲ್ಲರ ಹುಬ್ಬು ಮೇಲೇರಿಸಿತ್ತು. ಟ್ರೆಡ್‌ಮಿಲ್ ಮೇಲೆ ಕಸರತ್ತು ಮಾಡುತ್ತಲೇ ಬೆಳಿಗ್ಗೆಯ ನ್ಯೂಸ್‌ಗಳನ್ನು ಟಿವಿಯಲ್ಲಿ ನೋಡುವ ಓಪ್ರಾ, ಬೆಳಿಗ್ಗೆ ಎದ್ದು ತನ್ನ ಐದು ನಾಯಿಗಳನ್ನು ವಾಕಿಂಗ್ ಮಾಡಿಸಿ ತಾನೇ ಸ್ವತಃ ಸ್ನಾನ ಮಾಡಿಸುತ್ತಾರಂತೆ. ಈಕೆಯ ಐಶಾರಾಮಿ ಜೀವನಶೈಲಿಯ ಬಗ್ಗೆ ನೂರೆಂಟು ಕಥೆಗಳಿವೆ. ಅಮೆರಿಕದ ಅಧ್ಯಕ್ಷ ಹುದ್ದೆಗೆ ಈಕೆ ಸ್ಪರ್ಧಿಸಿದರೆ ಗೆಲ್ಲುವುದು ಕಷ್ಟವೇನಾಗಲಿಕ್ಕಿಲ್ಲ. ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65